# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 688 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12–03–2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಬದಿಯಲ್ಲಿರುವ ಅಪಾಯಕಾರಿ ಮರ, ಕಟ್ಟಡಗಳು, ವಿದ್ಯುತ್ ಕಂಬ ಇತ್ಯಾದಿಗಳನ್ನು ತೆರವುಗೊಳಿಸಲಾಗುತ್ತದೆಯೇ; ಇಲಾಖೆಯ ಗಮನಕ್ಕೆ ಬಂದ ಎಷ್ಟು ಪ್ರಕರಣಗಳನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗಿದೆ. | ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಬದಿಯಲ್ಲಿರುವ ಅಪಾಯಕಾರಿ ಮರ, ಕಟ್ಟಡಗಳು, ವಿದ್ಯುತ್ ಕಂಬ ಇತ್ಯಾದಿಗಳು ಕಂಡುಬಂದಲ್ಲಿ ಸಂಬಂಧಪಟ್ಟ ಇಲಾಖೆಗಳಾದ ಅರಣ್ಯ ಇಲಾಖೆ, ವಿದ್ಯುತ್ ಇಲಾಖೆಗಳ ಗಮನಕ್ಕೆ ತಂದು, ಆಯಾ ಇಲಾಖೆಗಳಿಂದಲೇ ತೆರವುಗೊಳಿಸಲು ಕ್ರಮವಹಿಸಲಾಗುತ್ತದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈಗಾಗಲೇ ಕೆಲವು ಪ್ರಕರಣಗಳಲ್ಲಿ ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನಗಳ ಮೇಲೆ ಮರ ಬಿದ್ದು ಪ್ರಾಣಹಾನಿಯಾಗಿದ್ದು, ಮುಂದಿನ ದಿನಗಳಲ್ಲಿ ರಸ್ತೆ ಪ್ರಯಾಣಿಕರ ಸುರಕ್ಷತೆಗಾಗಿ ಏನು ಕ್ರಮವಹಿಸಲಾಗಿದೆ. | ರಸ್ತೆ ಬದಿಯಲ್ಲಿರುವ ಅಪಾಯಕಾರಿ ಮರಗಳು ಸಂಚರಿಸುತ್ತಿರುವ ವಾಹನಗಳ ಮೇಲೆ ಬಿದ್ದು ಪ್ರಾಣ ಹಾನಿಯಾಗಿರುವಂತಹ ಯಾವುದೇ ಪ್ರಕರಣಗಳು ಉಡುಪಿ ವಿಭಾಗ ಹಾಗೂ ಮಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಇರುವುದಿಲ್ಲ. ರಸ್ತೆಯ ಅಂಚಿನಲ್ಲಿರುವ ಮರ / ರೆಂಬೆ–ಕೊಂಬೆಗಳನ್ನು ಕಡಿಯುವುದು /ತೆರವುಗೊಳಿಸುವುದ ಲೋಕೋಪಯೋಗಿ ಇಲಾಖಾ ವ್ಯಾಪ್ತಿಗೆ ಒಳಪಡದ ಕಾರಣ ಆಗಿಂದ್ದಾಗ್ಗೆ ಹಾಗೂ ಮಳೆಗಾಲ ಪೂರ್ವದಲ್ಲಿ ರಸ್ತೆಯ ಅಂಚಿನಲ್ಲಿರುವ ಅಪಾಯಕಾರಿ ಮರ/ ರೆಂಬೆ–ಕೊಂಬೆಗಳನ್ನು ಗುರುತಿಸಿ ಅಂತಹ ಅಪಾಯಕಾರಿ ಮರ/ ರೆಂಬೆ–ಕೊಂಬೆಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಗೆ ಪತ್ರದ ಮುಖೇನ ಕೋರಿ, ತೆರವುಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. |
| ಇ) | ಈ ರಸ್ತೆಗಳ ಭೂಗಡಿಯ ಅಂಚನ್ನು ಮತ್ತು ಕಟ್ಟಡ ರೇಖೆಯನ್ನು ಗುರುತಿಸುವ ಸಕ್ಷಮ ಪ್ರಾಧಿಕಾರ ಇಲಾಖೆಯೇ ಆಗಿದ್ದು, ಕಟ್ಟಡ ರೇಖೆಯ ಅಂತರದೊಳಗಿನ ರಸ್ತೆ ಬದಿಯ ಅನಧಿಕೃತ ಅಂಗಡಿಗಳನ್ನು ತೆರವುಗೊಳಿಸದಿರಲು ಕಾರಣವೇನು; ಮತ್ತು ಈ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲು ಅವಕಾಶವಿದೆಯೇ; | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಟ್ಟಡ ರೇಖೆಯ ಅಂತರದೊಳಗಿನ ರಸ್ತೆ ಬದಿಯ ಅನಧಿಕೃತ ಅಂಗಡಿಗಳನ್ನು ಕಾಲಕಾಲಕ್ಕೆ ಸಂಬಂಧಿಸಿದವರಿಗೆ ನೋಟೀಸು ನೀಡಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ ಮತ್ತು ಈ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಲೋಕೋಪಯೋಗಿ ಇಲಾಖೆಯ ರಸ್ತೆ ಅಂಚಿನಲ್ಲಿ ಕಟ್ಟಡ ರೇಖೆಯನ್ನು ಸಕ್ಷಮ ಪ್ರಾಧಿಕಾರ ತಾನೇ ಆಗಿದ್ದರೂ ಸಹಾ ರಸ್ತೆ ಅಂಚಿನಲ್ಲಿ ಕಟ್ಟಡ ಕಟ್ಟುವರೆ ನಿರಾಕ್ಷೇಪಣಾ ಪತ್ರ ನೀಡುವ ಮೊದಲು ಸ್ಥಳೀಯ ಸಂಸ್ಥೆಗಳಾದ ನಗರ ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮ ಪಂಚಾಯತಿಗಳ ಅಭಿಪ್ರಾಯವನ್ನು ಯಾವ ಉದ್ದೇಶಕ್ಕಾಗಿ ಕೋರಲಾಗುತ್ತಿದೆ. | ಲೋಕೋಪಯೋಗಿ ಇಲಾಖೆಯ ರಸ್ತೆ ಅಂಚಿನಲ್ಲಿ ಕಟ್ಟಡ ರೇಖೆಯ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಅಧಿಕಾರ ಸದರಿ ರಸ್ತೆಯ ಪ್ರಾಧಿಕಾರಿಗೆ (ಕಾರ್ಯಪಾಲಕ ಇಂಜಿನಿಯರ್ ರವರಿಗೆ) ಇದ್ದು, ನಿರಪೇಕ್ಷಣಾ ಪತ್ರ ನೀಡುವ ಮೊದಲು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಾದ ನಗರ ಪಾಲಿಕೆ ಅಥವಾ ಗ್ರಾಮ ಪಂಚಾಯತಿಗಳನ್ನು ರಸ್ತೆಯ ದಾಖಲಿತ ಭೂಗಡಿಯನ್ನು ಮತ್ತು ನಗರ/ಪಟ್ಟಣ/ಗ್ರಾಮಠಾಣಾ ಪರಿಮಿತಿಗಳನ್ನು ಗುರುತಿಸುವ ಉದ್ದೇಶಕ್ಕಾಗಿ ಅಭಿಪ್ರಾಯವನ್ನು ಕೋರಲಾಗುತ್ತಿದೆ. |
| ಉ) | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಭೂಗಡಿಯ ಅಂಚಿನಲ್ಲಿರುವ ಭೂಮಿಯನ್ನು ಬಫರ್ ವಲಯದ ಭೂಮಿಯನ್ನು ಕಂದಾಯ ಇಲಾಖೆ ಸಂಬಂಧಪಟ್ಟ ಇಲಾಖೆಗಳ ಸಹಮತಿಯೊಂದಿಗೆ ಭೂಪರಿವರ್ತನೆ ಮಾಡಿ ವಿನ್ಯಾಸ ಅನುಮೋದನೆ ಮಾಡಿ ನಮೂನೆ 9/11 ಪಡೆದ ನಂತರ ಸದರಿ ಜಾಗದಲ್ಲಿ ಕಟ್ಟಡ ನಿರ್ಮಿಸಲು ಅನುಮತಿ ನಿರಾಕರಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗು-ತ್ತಿರುವ ಬಗ್ಗೆ ಸರ್ಕಾರ ಏನು ಕ್ರಮವಹಿಸುತ್ತಿದೆ? | ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಿದ ಕಟ್ಟಡ ರೇಖೆಯ ಮಿತಿಯನ್ನು ಗಮನದಲ್ಲಿರಿಸಿ, ಕಟ್ಟಡ ಕಟ್ಟಲು ಅನುಮತಿ ನೀಡಲಾಗುತ್ತಿದೆ. ಕಟ್ಟಡ ರೇಖೆಯ ಮಿತಿಯೊಳಗೆ ಇದ್ದಲ್ಲಿ ಭವಿಷ್ಯದಲ್ಲಿ ರಸ್ತೆಗಳ ಅಗಲೀಕರಣ ಹಾಗೂ ಮೇಲ್ದರ್ಜೆಗೇರಿಸುವ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಹಾಗೂ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವ ಸಂಭವವಿರುವುದರಿಂದ ಸದರಿ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತಿಲ್ಲ. |

ಸಂಖ್ಯೆ: ಲೋಇ 29 ಸಿಬಿಆರ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು